## ಶ್ರೀರಾಮಕೃಷ್ಣರನ್ನು ಕುರಿತು

# ವಿವೇಕಾನಂದರು



ಕಠಿಣವಾದ ಅಕಳಂಕ ಪವಿತ್ರತೆ ಶ್ರೀರಾಮಕೃಷ್ಣರ ಜೀವನದಲ್ಲಿ ಉದಿಸಿತ್ತು. ನಮ್ಮ ಜೀವನದ ಮುಂದಿರುವ ಹೋರಾಟವನ್ನೆಲ್ಲ ಅವರು ಮೀರಿ ಹೋಗಿದ್ದರು. ತಮ್ಮ ಆಯುಷ್ಯದ ಮುಕ್ಕಾಲು ಪಾಲನ್ನು ಸವೆಯಿಸಿ ಪಡೆದ ಆಧ್ಯಾತ್ಮಿಕ ಅನರ್ಘ್ಯರತ್ನಗಳನ್ನು ಮಾನವಕೋಟಿಗೆ ದಾನಮಾಡುವುದಕ್ಕಾಗಿ ಅವರು ಸಿದ್ಧರಾಗಿದ್ದರು. ಅವರ ಬೋಧನೆ ಮತ್ತು ಉಪದೇಶ ವಿಚಿತ್ರ ರೀತಿಯದು... ಈ ಗುರುವಿಗೆ ಜನರು ತಮ್ಮನ್ನು ಗೌರವಿಸಬೇಕು ಎಂಬ ಭಾವನೆಯು ಇರಲಿಲ್ಲ. ತಾನೊಬ್ಬ ದೊಡ್ಡ ಗುರುವೆಂಬ ಭಾವನೆಯೂ ಅವರಲ್ಲಿ ಇರಲಿಲ್ಲ. ಎಲ್ಲವನ್ನೂ ಮಾಡುತ್ತಿರುವುದು ಜಗನ್ಮಾತೆಯಲ್ಲದೆ ತಾನಲ್ಲವೆಂದು ಅವರು ಭಾವಿಸಿದ್ದರು. "ನನ್ನ ಬಾಯಿಂದ ಏನಾದರೂ ಒಳ್ಳೆಯದು ಬಂದರೆ ಅದನ್ನು ಹೊರಡಿಸುತ್ತಿರುವವಳು ತಾಯಿ. ಅದರೊಂದಿಗೆ ನನಗೆ ಸಂಬಂಧವಿದೆ" ಎಂದು ಅವರು ಅನವರತವೂ ಹೇಳುತ್ತಿದ್ದರು. ಅವರು ಮಾಡಿದ ಪ್ರತಿಯೊಂದು ಕೆಲಸದ ಹಿಂದೆ ಇದ್ದ ಭಾವ ಇದು..."ಮೊದಲು ಶೀಲವನ್ನು ರೂಢಿಸಿಕೊಂಡು, ಆಧ್ಯಾತ್ಮಿಕ ಶಕ್ತಿಯನ್ನು ಗಳಿಸಿಕೊಳ್ಳಿ; ಫಲ ತಾನಾಗಿ ಬರುವುದು" – ಇದೇ ಅವರ ಸಿದ್ಧಾಂತ... ಅವರು ಯಾರನ್ನೂ ದೂರಲಿಲ್ಲ. ಹಲವಾರು ವರುಷಗಳು ಅವರ ಸಮೀಪದಲ್ಲಿದ್ದೆ. ಯಾವ ಪಂಥವನ್ನೂ ಒಮ್ಮೆಯಾದರೂ ಅವರು ದೂರಿದುದನ್ನು ನಾನು ಕೇಳಲಿಲ್ಲ. ಎಲ್ಲ ಪಂಥಗಳ ಮೇಲೂ ಅವರಿಗೆ ಒಂದೇ ಸಮನಾದ ಸಹಾನುಭೂತಿ ಇತ್ತು. ಎಲ್ಲರಲ್ಲಿಯೂ ಒಂದು ಸಾಮರಸ್ಯವನ್ನು ಅವರು ಕಂಡಿದ್ದರು. ಒಬ್ಬ ಜ್ಞಾನಿಯಾಗಿರಬಹುದು, ಭಕ್ತನಾಗಿರಬಹುದು, ಯೋಗಿಯಾಗಿರಬಹುದು, ಅದ್ವಿತೀಯ ಕರ್ಮಿಯಾಗಿರಬಹುದು. ಎಲ್ಲ ಧರ್ಮಗಳೂ ಇವುಗಳಲ್ಲಿ ಒಂದಲ್ಲ ಒಂದು ಭಾವವನ್ನು ಪ್ರತಿನಿಧಿಸುತ್ತವೆ. "ಇವೆಲ್ಲವನ್ನೂ ಒಬ್ಬನೇ ರೂಢಿಸುವುದು ಸಾಧ್ಯ. ಭವಿಷ್ಯದ ಜನಾಂಗ ಮಾಡುವುದು ಇದನ್ನೇ." ಇದೇ ಅವರ ಭಾವನೆ. ಅವರು ಯಾರನ್ನೂ ದೂರಲಿಲ್ಲ. ಎಲ್ಲರಲ್ಲಿಯೂ ಒಳ್ಳೆಯದನ್ನೇ ನೋಡಿದರು.

(ಕೊಲ್ಕತಾದ ಸ್ವಾಗತ ಸಭೆಯಲ್ಲಿ) ಸಹೋದರರೇ, ನನ್ನ ಹೃದಯದ ಮತ್ತೊಂದು ನಾಡಿಯನ್ನು ನೀವು ಮಿಡಿದಿರುವಿರಿ. ಅದೇ ನನ್ನ ಗುರುದೇವ, ನನ್ನ ಆಚಾರ್ಯ, ನನ್ನ ಜೀವನಾದರ್ಶ, ನನ್ನ ಇಷ್ಟ, ನನ್ನ ಪ್ರಾಣ, ನನ್ನ ದೇವತೆಯಾದ ಶ್ರೀರಾಮಕೃಷ್ಣ ಪರಮಹಂಸರ ನಾಮೋಚ್ಚಾರಣೆಯನ್ನು ಮಾಡಿರುವಿರಿ... ಜಗತ್ತಿನ ಇತಿಹಾಸದಲ್ಲಿ ಮಹಾತ್ಮರ ಜೀವನವನ್ನು ಮತ್ತು ಸಂದೇಶಗಳನ್ನು ಕುರಿತು ಓದುತ್ತೇವೆ... ಅಂತಹ ಯಾವ ಒಬ್ಬ ವ್ಯಕ್ತಿಯೂ ನನ್ನ ದೃಷ್ಟಿಯಲ್ಲಿ ನಾನೇ ಕಣ್ಣಾರೆ ಕಂಡಂಥ ವ್ಯಕ್ತಿಯಷ್ಟು ಉಜ್ವಲವಾಗಿಲ್ಲ. ಆ ವ್ಯಕ್ತಿಯೇ ಶ್ರೀರಾಮಕೃಷ್ಣ ಪರಮಹಂಸರು. ಅವರ ಛಾಯೆಯಲ್ಲಿ ನಾನು ಬೆಳೆದಿರುವೆನು. ಎಲ್ಲವನ್ನೂ ಅವರ ಅಡಿದಾವರೆಯಲ್ಲಿ ಕಲಿತಿರುವೆನು.

... ಆಧ್ಯಾತ್ಮಿಕ ಮಹಾತರಂಗವೊಂದು ಬರುವುದಕ್ಕೆ ಮುಂಚೆ ಸಮಾಜದಲ್ಲಿ ಹಲವು ಸಣ್ಣಪುಟ್ಟ ಅಲೆಗಳೇಳುತ್ತವೆ. ಅದರಲ್ಲಿ ಒಂದು ನಮ್ಮ ದೃಷ್ಟಿಗೆ ಗೋಚರವಾಗದೆ, ನಮಗೆ ತನ್ನ ಸುಳಿವನ್ನು ಕೊಡದೆ, ಒಂದು ಆಲೋಚನೆಗೆ ನಿಲುಕದೆ ಕ್ರಮೇಣ ದೊಡ್ಡದು ದೊಡ್ಡದಾಗಿ ಸಣ್ಣಪುಟ್ಟ ಅಲೆಗಳನ್ನೆಲ್ಲ ಒಳಗೊಂಡು ಅದ್ಭುತವಾಗಿ, ಮಹಾ ಪ್ರವಾಹವಾಗಿ ಯಾರಿಗೂ ಎದುರಿಸಲಾಗದ ಪ್ರಚಂಡ ಶಕ್ತಿಯೊಡನೆ ಸಮಾಜದ ಮೇಲೆ ಬೀಳುವುದು. ಇಂದು ನಮ್ಮ ಕಣ್ಣೆದುರಿಗೆ ಹೀಗೆ ಆಗುತ್ತಿದೆ. ಕಣ್ಣಿದ್ದರೆ ನೋಡುವಿರಿ. ನಿಮ್ಮ ಹೃದಯ ತೆರೆದಿದ್ದರೆ ಅದನ್ನು ಸ್ವೀಕರಿಸುವಿರಿ... ಇದು ಯಾರ ಶಕ್ತಿ? ನನ್ನದೆ ಅಥವಾ ನಿಮ್ಮದೆ? ಯಾವ ಶಕ್ತಿ ಶ್ರೀರಾಮಕೃಷ್ಣ ಪರಮಹಂಸರ ರೂಪಿನಲ್ಲಿ ಆವಿರ್ಭೂತವಾಯಿತೊ ಅದೇ ಶಕ್ತಿ. ಏಕೆಂದರೆ, ನೀವು ಮತ್ತು ನಾನು, ಸಾಧುಗಳು ಮತ್ತು ಪ್ರವಾದಿಗಳು, ಅವತಾರ ಪುರುಷರು ಮತ್ತು ಇಡಿಯ ಬ್ರಹ್ಮಾಂಡ – ಇವೆಲ್ಲ ಆ ಶಕ್ತಿಯ ಆವಿರ್ಭಾವ ಮಾತ್ರ. ಆ ಶಕ್ತಿ ಕೆಲವು ವೇಳೆ ಕಡಮೆ, ಕೆಲವು ವೇಳೆ ಹೆಚ್ಚಾಗಿ ಘನೀಭೂತವಾಗುವುದು. ಈ ಸಮಯದಲ್ಲಿ ನಾವು ಆ ಮಹಾಶಕ್ತಿಯ ಲೀಲೆಯ ಆರಂಭವನ್ನು ಮಾತ್ರ ನೋಡುತ್ತಿರುವೆವು. ಈಗಿರುವವರು ಕಾಲವಾಗುವುದಕ್ಕೆ ಮುಂಚೆ ಆ ಅದ್ಭುತಶಕ್ತಿಯ ಲೀಲೆಯನ್ನು ನೋಡುವರು. ಭರತವರ್ಷದ ಪುನರುತ್ಥಾನದ ಸಮಯಕ್ಕೆ ಸರಿಯಾಗಿ ಅದು ಬಂದಿದೆ.

ನಮಗೆ ಆಧ್ಯಾತ್ಮಿಕ ಆದರ್ಶಗಳು ಬೇಕು, ಮಹಾ ಆಧ್ಯಾತ್ಮಿಕ ವ್ಯಕ್ತಿಗಳ ಸುತ್ತ ಉತ್ಸಾಹದಿಂದ ನೆರೆಯಲು ನಾವು ಇಚ್ಛಿಸುತ್ತೇವೆ. ನಮ್ಮ ನಾಯಕರು ಧಾರ್ಮಿಕ ಪುರುಷರಾಗಿರಬೇಕು. ಅಂತಹ ಧಾರ್ಮಿಕ ಪುರುಷರೊಬ್ಬರು ಶ್ರೀರಾಮಕೃಷ್ಣ ಪರಮಹಂಸರ ಸ್ವರೂಪದಲ್ಲಿ ನಮಗೆ ಲಭ್ಯವಾಗಿದ್ದಾರೆ. ಈ ದೇಶ ಉದ್ಧಾರವಾಗಬೇಕಾದರೆ, ನನ್ನ ಮಾತನ್ನು ಕೇಳಿ – ಆ ಹೆಸರಿನ ಸುತ್ತ ಉತ್ಸಾಹದಿಂದ ನಾವು ಒಟ್ಟುಗೂಡಬೇಕಾಗುತ್ತದೆ... ನಮ್ಮ ಜನಾಂಗದ ಹಿತಕ್ಕೆ, ದೇಶದ ಹಿತಕ್ಕೆ ಆ ಮಹಾ ಆದರ್ಶವನ್ನು ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬುದನ್ನು ನೀವೇ ನಿಷ್ಕರ್ಷಿಸಿ. ನಾವು ಇದನ್ನು ನೆನಪಿನಲ್ಲಿಡಬೇಕು – ಅವರು ನೀವು ನೋಡಿರುವ ವ್ಯಕ್ತಿಗಳೆಲ್ಲರಿಗಿಂತ ಪವಿತ್ರತಮರು... ನೀವು ಯಾರ ವಿಷಯವಾಗಿ ಓದಿ ತಿಳಿದುಕೊಂಡಿರುವಿರೋ ಆ ಎಲ್ಲ ವ್ಯಕ್ತಿಗಳಿಗಿಂತ ಇವರು ಪವಿತ್ರೋತ್ತಮರು.

ನಮ್ಮ ಜನಾಂಗದ ಹಿತಕ್ಕೆ, ಕೇವಲ ಕರ್ತವ್ಯ ದೃಷ್ಟಿಯಿಂದ ಈ ಅತ್ಯದ್ಭುತ ಆಧ್ಯಾತ್ಮಿಕ ವ್ಯಕ್ತಿಯ ಆದರ್ಶವನ್ನು ನಿಮ್ಮ ಮುಂದಿಡುವೆನು.. ಆ ಶ್ರೀರಾಮಕೃಷ್ಣ ಪರಮಹಂಸರೇ ನಮ್ಮ ದೇಶದ, ಜನಾಂಗದ, ಇಡೀ ವಿಶ್ವದ ಹಿತಕ್ಕೆ, ನಿಮ್ಮ ಹೃದಯ ವಿಕಾಸವಾಗುವಂತೆ ಮಾಡಲಿ. ನಾನು ಪ್ರಯತ್ನ ಪಡಲಿ, ಪಡದೆ ಇರಲಿ, ನಮ್ಮ ದೇಶದಲ್ಲಿ ಅವಶ್ಯಕವಾಗಿ ಬರಬೇಕಾಗಿರುವ ಮಹಾ ಬದಲಾವಣೆಗೆ ಸೊಂಟ ಕಟ್ಟಿ ಸತ್ಯಸಂಧರಾಗಿ ದುಡಿಯುವಂತೆ ಮಾಡಲಿ. ಭಗವಂತನ ಕೆಲಸ ನಮ್ಮ ಇಚ್ಛೆಗೆ ಕಾದು ಕುಳಿತುಕೊಳ್ಳುವುದಿಲ್ಲ. ಅವನ ಕೆಲಸ ಮಾಡುವುದಕ್ಕೆ ನೂರಾರು ಸಹಸ್ರಾರು ಜನರನ್ನು ಧೂಳಿನಿಂದ ಬೇಕಾದರೆ ಸೃಷ್ಟಿಸುವನು. ಅವನ ಅಧೀನದಲ್ಲಿ ಕೆಲಸ ಮಾಡುವ ಸೌಭಾಗ್ಯ ದೊರಕಿದುದಕ್ಕೆ ನಾವೇ ಧನ್ಯರು!

# ವಿವೇಕ ವೈಭವ ಗಾಥಾ



ಸ್ವಾಮಿ ಜಗದಾತ್ಮಾನಂದ


## ಶಕ್ತಿಯ ಸಂದೇಶ

**ಸ್ವಾ**ತಂತ್ರ್ಯಪೂರ್ವದ ಹೋರಾಟದಲ್ಲಿ ದೇಶಪ್ರೇಮಿಗಳ ಹೃದಯದಲ್ಲಿ ವಿದ್ಯುತ್‌ಸಂಚಾರ ಮೂಡಿಸಿದ, ಸ್ಫೂರ್ತಿಯ ಕಿಡಿಯನ್ನು ಹೊತ್ತಿಸಿದ, ತ್ಯಾಗಸೇವೆಗಳಿಗೆ ಜನರನ್ನು ದೀಕ್ಷಾಬದ್ಧರಾಗುವಂತೆ ಪ್ರೇರೇಪಿಸಿದ ಸ್ವಾಮಿ ವಿವೇಕಾನಂದರ ವಾಣಿಯಲ್ಲಿ ತಿರುತಿರುಗಿ ಅನುರಣಿತವಾಗುವ ಒಂದು ಬೋಧನೆಯೇ, ನಮ್ಮ ಜನಮನದಲ್ಲಿ ಆತ್ಮವಿಶ್ವಾಸದಿಂದ ಎಚ್ಚರಗೊಳಿಸಬಹುದಾದ ಪ್ರಚಂಡ ಇಚ್ಛಾಶಕ್ತಿ ಮತ್ತು ಕಾರ್ಯಶಕ್ತಿಯ ವಿಚಾರ. ತನ್ನ ದಿವ್ಯತೆಯಲ್ಲಿ, ತನ್ನಲ್ಲಿ ಅಡಗಿರುವ ಅಪಾರಶಕ್ತಿಯಲ್ಲಿ ಮೊದಲು ಮಾನವ ವಿಶ್ವಾಸವಿಟ್ಟಿದ್ದಾದರೆ, ಆತ ಎಂಥ ಅದ್ಭುತವನ್ನಾದರೂ ಸಾಧಿಸಬಹುದು. ಆಗ ಅವನು ತನ್ನ ವ್ಯಕ್ತಿತ್ವಚಿತ್ರದಲ್ಲಿ ಶೈಶವದಿಂದಲೇ ಅಂಟಿಕೊಂಡು ಬಂದ ನಿಷೇಧಾತ್ಮಕ ಭಾವನೆಗಳನ್ನೂ, ದ್ವೇಷದೌರ್ಬಲ್ಯಗಳ ಸ್ಮೃತಿಯನ್ನೂ ಕಿತ್ತೆಸೆಯಬಹುದು. ಆ ಆತ್ಮವಿಶ್ವಾಸದಿಂದ ಶಕ್ತಿ, ವೈಭವ, ಪವಿತ್ರತೆ, ಏಕಾಗ್ರತೆ, ಸ್ಥೈರ್ಯವೇ ಮೊದಲಾದ ಬದುಕನ್ನು ಬೆಳಗುವ ಗುಣಗಳೆಲ್ಲವೂ ಅವನಲ್ಲಿ ಉಂಟಾಗುವುವು. ಚೆನ್ನೈನ ಒಂದು ಪ್ರಮುಖ ಉಪನ್ಯಾಸದಲ್ಲಿ ಸ್ವಾಮೀಜಿ ನುಡಿದ ಸಿಡಿಲನುಡಿಯಲ್ಲಿ ಅಡಗಿರುವ ಈ ಮಹಾಸಂದೇಶದ ಅರ್ಥವ್ಯಾಪ್ತಿಯನ್ನು ಎಲ್ಲರೂ, ಮುಖ್ಯವಾಗಿ ಯುವಕರು ಮನನ ಮಾಡಬೇಕು. ಆ ಉಪನ್ಯಾಸದಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ:

"ಶಾಶ್ವತ ನಿಯಮಗಳನ್ನು ಆಧರಿಸಿ ನಿಂತ ನಮ್ಮ ಧರ್ಮದಲ್ಲಿ ಅಡಗಿರುವ ಮಹಾಸತ್ಯಗಳನ್ನು ಸಾಮಾನ್ಯರಿಗೂ ಬೋಧಿಸಿ. ಶತಶತಮಾನಗಳಿಂದ ಜನರಿಗೆ ಅವರ ಅಧಃಪತನಕ್ಕೆ ಕಾರಣವಾದ ಸಿದ್ಧಾಂತವಾದ ಕಾರಣಗಳನ್ನೇ ಬೋಧಿಸಲಾಗಿದೆ. 'ಅವರು ಏನೂ ಅಲ್ಲ. ಅಪ್ರಯೋಜಕ ವ್ಯಕ್ತಿಗಳು' ಎಂದೇ ಎಲ್ಲರೂ ಹೇಳುತ್ತಾ ಬಂದಿದ್ದಾರೆ. ಜಗತ್ತಿನಾದ್ಯಂತ ಎಲ್ಲೆಡೆಯಲ್ಲೂ ಇದೇ ಕತೆ. ದೀನದಲಿತರನ್ನು ಮನುಷ್ಯರೇ ಅಲ್ಲವೆಂಬಂತೆ ನೋಡಲಾಗಿದೆ. ಶತಮಾನಗಳಿಂದ ಅವರನ್ನು ಹೆದರಿಸಿ ಗದರಿಸಿ ಪ್ರಾಣಿಮಟ್ಟದ ಕನಿಷ್ಠಸ್ಥಿತಿಗೆ ಕೊಂಡೊಯ್ಯಲಾಗಿದೆ. ಅವರು ಈ ಆತ್ಮನ ವೈಭವವನ್ನು ಎಂದೂ ಕೇಳಲಿಲ್ಲ. ಅವರೆಲ್ಲರೂ ಈ ಆತ್ಮವಿಚಾರವನ್ನು ಕೇಳುವಂತಾಗಲಿ. ಅತ್ಯಂತ ನಿಕೃಷ್ಟಸ್ಥಿತಿಗಿಳಿದವರೂ ಇದನ್ನು ಕೇಳಲಿ. ತಮ್ಮನ್ನು ನೀಚಾತಿನೀಚರೆಂದು ತಿಳಿದುಕೊಂಡವರಿಗೂ ಈ ದೈವೀ ತೇಜಸ್ಸಿನ ಆತ್ಮವಿದೆ; ಬೆಂಕಿ ಸುಡದ, ನೀರು ತೋಯಿಸದ, ಖಡ್ಗ ತುಂಡರಿಸದ, ನಾಶರಹಿತ ಚೈತನ್ಯವಿದೆ; ಸಾವಿಲ್ಲದ ನೋವಿಲ್ಲದ ಸರ್ವಶಕ್ತವಾದ ಆದ್ಯಂತರಹಿತವಾದ ಪರಮಪವಿತ್ರವಾದ, ಸರ್ವಜ್ಞನೂ ಸರ್ವವ್ಯಾಪಿಯೂ ಆದ ಆತ್ಮವಿದೆ. ಅವರೆಲ್ಲರೂ ತಮ್ಮಲ್ಲಿ ತಾವು ಶ್ರದ್ಧೆಯನ್ನು ಬೆಳಸಿಕೊಳ್ಳಲಿ. ಆಂಗ್ಲರಿಗೂ ನಿಮಗೂ ಇರುವ ವ್ಯತ್ಯಾಸಕ್ಕೆ ಕಾರಣವೇನು? ಅವರು ತಮ್ಮ ಹಕ್ಕು, ಕರ್ತವ್ಯ, ರಾಜನೀತಿ ಮುಂತಾದವುಗಳನ್ನು ಕುರಿತು ಮಾತನಾಡಲಿ. ನಾನು ನಿಜವಾದ ವ್ಯತ್ಯಾಸ ಏನೆಂಬುದನ್ನು ಕಂಡುಕೊಂಡಿದ್ದೇನೆ. 'ಒಬ್ಬ ಆಂಗ್ಲನಾದ ನಾನು ಏನನ್ನೂ ಬೇಕಾದರೂ ಸಾಧಿಸಬಲ್ಲೆ' ಎಂದು ಪ್ರತಿಯೊಬ್ಬ ಆಂಗ್ಲ ವ್ಯಕ್ತಿಯೂ ದೃಢವಾಗಿ ನಂಬಿರುತ್ತಾನೆ."

## ಮಹಾ ಸಮನ್ವಯ: ವಿಶ್ವಬಂಧು ಪರಿಷತ್ತು

ಪರಮಸತ್ಯವನ್ನು, 'ಸರ್ವಜ್ಞ, ಸರ್ವಶಕ್ತ, ಸರ್ವವ್ಯಾಪಿ, ಸರ್ವಾಂತರ್ಯಾಮಿ, ಭಕ್ತರಿಗಾಗಿ ಸಾಕಾರನೂ ಹೌದು, ಸ್ವಸ್ವರೂಪದಲ್ಲಿ ನಿರಾಕಾರನೂ ಹೌದು' ಎಂಬುದನ್ನು ಮನಗಂಡರೆ ಆತನ ಮಕ್ಕಳಾದ ನಾವು ಪರಸ್ಪರ ವಿಶ್ವಾಸ ಸೌಹಾರ್ದ ಸಹನೆ ಇವುಗಳನ್ನು ಕಾರ್ಯರೂಪಕ್ಕೆ ತರಲು ಖಂಡಿತ ಸಾಧ್ಯ. ಹಾಗೂ ಮತಾಂಧತೆ, ಮತೀಯ ಬಾವಿಕಪ್ಪೆಯ ಸಂಕುಚಿತತೆಯಿಂದ ಪಾರಾಗಲು ಸಾಧ್ಯ. ಬೇರೆ ಬೇರೆ ಧರ್ಮ, ಮತ ಪಂಥಗಳನ್ನು ಅನುಸರಿಸುವವರನ್ನು ಕಂಡು ಅವರ ನಾಶವನ್ನು ಹಾರೈಸುವ ಬದಲು, ಅವರ ಒಳಿತನ್ನು ಹಾರ್ದಿಕವಾಗಿ ಹಾರೈಸುತ್ತ, ಅವರಿಗೆ ಸಹಕಾರ ಸಹಾಯ ನೀಡುವ ಮನೋವೃತ್ತಿಯನ್ನು ಬೆಳೆಸಲು ಸಾಧ್ಯ. ಇದಕ್ಕೆ ಬೇಕಾಗುವ ತಾತ್ತ್ವಿಕ ಹಿನ್ನೆಲೆಯನ್ನು ವೇದಾಂತ ಅಥವಾ ಉಪನಿಷತ್ತುಗಳು ನೀಡುತ್ತವೆ. ಆಧುನಿಕ ವಿಜ್ಞಾನಗಳ ವಿಶಿಷ್ಟ ಅನ್ವೇಷಣೆಗಳ ಬೆಳಕಿನಲ್ಲಿ ಈ ವೇದಾಂತೋಕ್ತವಾದ ತಾತ್ತ್ವಿಕ ಹಿನ್ನಲೆಗೆ ಬಲವಾದ ಸಾಕ್ಷ್ಯಾಧಾರಗಳು ದೊರೆಯುತ್ತವೆ. ಮಾತ್ರವಲ್ಲ, ಎಲ್ಲ ಧರ್ಮ ಪಥ ಪಂಥಗಳಲ್ಲೂ



**ನಾನು ನನ್ನ ಶರೀರವನ್ನು ಹಳೆಯ ಬಟ್ಟೆಯನ್ನು ಎಸೆಯುವಂತೆ ಯೋಗಶಕ್ತಿಯಿಂದ ಎಸೆಯುತ್ತೇನೆ. ಎಲ್ಲಿಯವರೆಗೆ ಮಾನವನು ತಾನು ದೈವದೊಂದಿಗೆ ಒಂದಾಗಿರುವೆನೆಂಬುದನ್ನು ತಿಳಿಯಲಾರನೋ, ಅಲ್ಲಿಯವರೆಗೂ ನನಗೆ ವಿಶ್ರಾಂತಿ ಇಲ್ಲ. ಅಲ್ಲಿಯ ವರೆಗೂ ಎಲ್ಲೆಡೆ ಜನರನ್ನು ಸ್ಫೂರ್ತಿಗೊಳಿಸುತ್ತಿರುತ್ತೇನೆ.**

**– ಸ್ವಾಮಿ ವಿವೇಕಾನಂದ**